ದಿನಾಂಕ **31.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ವಾದಿ ಪರ ವಕೀಲರಿಂದ

ನಮ್ಮ ಪಂಚಾಯ್ತಿ ಗ್ರೇಡ್-2 ಪಂಚಾಯ್ತಿ ಆಗಿರುತ್ತದೆ. ಜುಲೈ 2023 ರಲ್ಲಿ ನಾನು ಜನಿವಾರ ಪಂಚಾಯ್ತಿಯಲ್ಲಿ ಪಿ.ಡಿ.ಒ ಆಗಿ ಕರ್ತವ್ಯ ಪ್ರಾರಂಭಿಸಿರುತ್ತೇನೆ. ಜಂಬೂರು ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಪ್ರಭಾರ ಪಡೆಯುವಾಗ ಪ್ರಭಾರದ ದಾಖಲೆಯನ್ನು ತಯಾರಿಸಿ ಒಂದನ್ನು ನಾವು ಇಟ್ಟುಕೊಂಡು ಇನ್ನೊಂದನ್ನು ಪ್ರಬಾರ ನೀಡುವವರಿಗೆ ಕೊಡುತ್ತೇವೆ ಎಂದರೆ ಸರಿ. ಮೇಲಾಧಿಕಾರಿಗಳ ಆದೇಶದಂತೆ ಕೆಲಸ ಮಾಡುತ್ತೇವೆ ಎಂದರೆ ಸರಿ.

ದಿಃ07.04.2022 ರಂದು ನಮ್ಮ ಮೇಲಾಧಿಕಾರಿಗಳು ಎಲ್ಲಾ ಪಂಚಾಯ್ತಿಗಳಿಗೆ ರಾಸಾಯನಿಕ ವಸ್ತುಗಳನ್ನು ಖರೀದಿಸಲು ಆದೇಶ ನೀಡಿರುತ್ತಾರೆ ಎಂದರೆ ನಿಯಮಾನುಸಾರ ಖರೀದಿಸಲು ಸೂಚಿಸಿರುತ್ತಾರೆ. ನಾನು ಪ್ರಬಾರ ವಹಿಸಿಕೊಳ್ಳುವ ಮೊದಲು ಆ ಪಂಚಾಯ್ತಿಗೆ ಮಹಾಲಕ್ಷ್ಮೀ ರವರು ಪಿ.ಡಿ. ಒ ಆಗಿದ್ದರು ಮತ್ತು ಪಾರ್ವತಮ್ಮ ಅದ್ಯಕ್ಷರಾಗಿದ್ದರು ಎಂದರೆ ಸರಿ. ನಿಪಿ-6 ರ ಮೇಲೆ ನಮ್ಮ ಪಂಚಾಯ್ತಿಯ ಸೀಲು ಮತ್ತು ಸಹಿ ಇರುತ್ತದೆ ಎಂದರೆ ಸೀಲು ಇರುತ್ತದೆ ಸಹಿಯನ್ನು ಗುರುತಿಸಲಾಗುವುದಿಲ್ಲ. ನಿಪಿ-6 ರಲ್ಲಿರುವ ಮೊಬೈಲ್ ಸಂಖ್ಯೆ ಪಿ.ಡಿ.ಒ ರವರದ್ದು ಎಂದರೆ ನನಗೆ ಗೊತ್ತಿಲ್ಲ. ವಾದಿ ಸಂಸ್ಥೆಯವರು ನಮ್ಮ ಪಂಚಾಯ್ತಿಗೆ 60 ಲೀಟರ್ ರಾಸಾಯನಿಕ ವಸ್ತುವನ್ನು ಸರಬರಾಜು ಮಾಡಿದ್ದರು ಎಂದರೆ ಸರಿ ಯಲ್ಲ. ದಿನಾಂಕ 17.07.2024 ರಂದು ವಾದಿ ಸಂಸ್ಥೆಯವರು ನಮ್ಮ ಪಂಚಾಯ್ತಿಗೆ ನೋಟೀಸ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ನೋಟೀಸ್ ಜಾರಿಯಾದ ಬಗ್ಗೆ ಪಂಚಾಯ್ತಿಯ ಸೀಲು ಸಹಿ ಇರುತ್ತದೆ ಎಂದರೆ ಸರಿಯಲ್ಲ. ದಿಃ17.07.2024 ರಂದು ನಾನೇ ಆ ಪಂಚಾಯ್ತಿಯ ಪಿ.ಡಿ.ಒ ಆಗಿದ್ದೆ ಎಂದರೆ ಸರಿ. ಆ ನೋಟಿಸ್ ನ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಆ ನೋಟೀಸ್ ಗೆ ಮರು ಉತ್ತರ ಕೊಡಲು

ಯಾವುದೇ ತೊಂದರೆ ಇರಲಿಲ್ಲ. ವಾದಿ ಸಂಸ್ಥೆಗೆ ರಾಸಾಯನಿಕ ವಸ್ತು ಸರಬರಾಜು ಮಾಡಿದ ಬಗ್ಗೆ ಬಾಕಿ ಇರುವ ಹಣ ನೀಡಲು ನಮ್ಮ ಪಂಚಾಯ್ತಿ ಬಾದ್ಯಸ್ಥರು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.